# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 714 (742) |
| ಸದಸ್ಯರ ಹೆಸರು | : | ಶ್ರೀ ಬಿ.ಜಿ.ಪಾಟೀಲ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 21.08.2026 |
| ಉತ್ತರಿಸುವ ಸಚಿವರು | : | ಮಾನ್ಯ ಜಲಸಂಪನ್ಮೂಲ ಸಚಿವರು |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ಆಲಮಟ್ಟಿ ಹಾಗೂ ನಾರಾಯಣಪುರ ಜಲಾಶಯಗಳಲ್ಲಿ ಪ್ರಸ್ತುತ ಎಷ್ಟು ಟಿಎಂಸಿ ನೀರಿದೆ ಹಾಗೂ ಈ ಎರಡು ಜಲಾಶಯಗಳಿಗೆ ಎಷ್ಟು ನೀರನ್ನು ಸಂಗ್ರಹಿಸುವ ಸಾಮರ್ಥ್ಯವಿದೆ; | ಆಲಮಟ್ಟಿ ಹಾಗೂ ನಾರಾಯಣಪುರ ಜಲಾಶಯಗಳಲ್ಲಿ ಪ್ರಸ್ತುತ ಸಂಗ್ರಹವಾಗಿರುವ ನೀರಿನ ವಿವರ, ಅಚ್ಚುಕಟ್ಟು ಪ್ರದೇಶ, ಜಿಲ್ಲೆ ಹಾಗೂ ತಾಲೂಕುಗಳ ವಿವರಗಳನ್ನು **ಅನುಬಂಧ**ದಲ್ಲಿ ನೀಡಲಾಗಿದೆ. |
| (ಆ) | ಸದರಿ ಜಲಾಶಯಗಳು ವ್ಯಾಪ್ತಿಯಲ್ಲಿ ಬರುವ ತಾಲೂಕುಗಳು ಯಾವುವು;ಹಾಗೂ ಎಷ್ಟು ಎಕ್ಕೇರ್ ಭೂಮಿಗೆ ಜಲಾಶಯಗಳಿಂದ ನೀರಾವರಿ ಸೌಲಭ್ಯ ಕಲ್ಪಿಸಲಾಗುತ್ತಿದೆ (ವಿವರ ನೀಡುವುದು) | |
| (ಇ) | ಈ ಜಲಾಶಯಗಳ ವ್ಯಾಪ್ತಿಯಲ್ಲಿ ಬರುವ ರೈತಾಪಿ ವರ್ಗದವರಿಗೆ ಪ್ರಸ್ತುತ ಇಂತಿಷ್ಟೆ ಬೆಳೆ ಬೆಳೆಯಬೇಕೆಂದು ತಿಳಿಸಲಾಗಿದೆಯೇ; | ಜಲಾಶಯಗಳ ವ್ಯಾಪ್ತಿಗೆ ಬರುವ ರೈತಾಪಿ ವರ್ಗದವರಿಗೆ ಮುಂಗಾರು ಹಂಗಾಮಿನ ಬೆಳೆಗಳಿಗಾಗಿ ದಿನಾಂಕ:28.07.2026 ರಿಂದ ನೀರನ್ನು ಕಾಲುವೆ ಮುಖಾಂತರ ಹರಿಸಲಾಗುತ್ತಿದೆ. ಸದರಿ ಅಚ್ಚುಕಟ್ಟು ರೈತ ಬಾಂಧವರಲ್ಲಿ ಲಘು ನೀರಾವರಿ ಬೆಳೆಗಳನ್ನು ಮಾತ್ರ ಬೆಳೆಯಲು ಹಾಗೂ ನೀರು ಪೋಲಾಗದಂತೆ ಹಿತವಾಗಿ, ಮಿತವಾಗಿ ನೀರನ್ನು ಬಳಸಲು ಪತ್ರಿಕಾ ಪ್ರಕಟಣೆಗಳ ಮೂಲಕ ವಿನಂತಿಸಲಾಗಿದೆ. |
| (ಈ) | ಈ ಮೇಲ್ಕಂಡ ಜಲಾಶಯಗಳಲ್ಲಿರುವ ನೀರಿನ ಲಭ್ಯತೆಯ ಆಧಾರದಲ್ಲಿ ಮುಂದಿನ ದಿನಗಳಲ್ಲಿ ಯಾವ ತೀರ್ಮಾನ ಕೈಗೊಳ್ಳಬೇಕೆಂದು ನಿರ್ಧರಿಸಿದೆ? | ಆಲಮಟ್ಟಿ ಜಲಾಶಯಕ್ಕೆ ಒಳ ಹರಿವು ಇರುವವರೆಗೆ ಮುಂಗಾರು ಹಂಗಾಮಿಗೆ ಕಾಲುವೆ ಜಾಲಕ್ಕೆ ದಿನಾಂಕ 28.07.2026 ರಿಂದ ಸತತವಾಗಿ ನೀರು ಪೂರೈಸಲು ಹಾಗೂ ಒಂದು ವೇಳೆ ಆಲಮಟ್ಟಿ ಆಣೆಕಟ್ಟಿಗೆ ಒಳಹರಿವು ಕಡಿಮೆಯಾದ ಪಕ್ಷದಲ್ಲಿ ಕಾಲುವೆ ಜಾಲಗಳಲ್ಲಿ 14 ದಿನ ಚಾಲೂ ಹಾಗೂ 10 ದಿನ ಬಂದ್ ಪದ್ಧತಿಯನ್ನು ಅನುಸರಿಸಿ ನೀರನ್ನು ದಿನಾಂಕ:10.11.2026 ರವರೆಗೆ ಹರಿಸಲು ತೀರ್ಮಾನಿಸಲಾಗಿದೆ. |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| | | ನವೆಂಬರ್-2026 ರಲ್ಲಿ ಎರಡೂ ಜಲಾಶಯಗಳ ಸಂಗ್ರಹಣೆಯನ್ನು ಗಮನದಲ್ಲಿರಿಸಿಕೊಂಡು, 2026-27 ನೇ ಸಾಲಿನ ಹಿಂಗಾರು ಹಂಗಾಮಿಗೆ ಹಾಗೂ ಜೂನ್ 2027 ರ ಅಂತ್ಯದವರೆಗೆ ಕುಡಿಯುವ ನೀರು ಹಾಗೂ ಇನ್ನಿತರ ಬಳಕೆಗೆ ನೀರು ಪೂರೈಸುವ ಕುರಿತು ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗುವುದು. |

ಸಂಖ್ಯೆ:ಜಸಂಇ 81 ಡಬ್ಲ್ಯೂಬಿಎಂ 2026

(ಎನ್. ಚಲುವರಾಯಸ್ವಾಮಿ)
**ಜಲಸಂಪನ್ಮೂಲ ಸಚಿವರು**

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಿ.ಜಿ.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 714 (742) ಕ್ಕೆ ಅನುಬಂಧ.**

| ಕ್ರ. ಸಂ | ಜಲಾಶಯದ ಹೆಸರು | ಒಟ್ಟು ನೀರಿನ ಸಂಗ್ರಹಣಾ ಸಾಮರ್ಥ್ಯ (ಟಿಎಂಸಿ) | ದಿ:20.08.26 ರ ನೀರಿನ ಸಂಗ್ರಹಣಾ ಸಾಮರ್ಥ್ಯ (ಟಿಎಂಸಿ) | ಶೇಕಡ ವಾರು ಸಂಗ್ರಹಣೆ | ಅಚ್ಚುಕಟ್ಟು ಪ್ರದೇಶ (ಹೆಕ್ಟೇರ್ ಗಳಲ್ಲಿ) | ಜಲಾಶಯದ ವ್ಯಾಪ್ತಿಗೆ ಒಳಪಡುವ ಜಿಲ್ಲೆಗಳು | ಜಲಾಶಯದ ವ್ಯಾಪ್ತಿಗೆ ಒಳಪಡುವ ತಾಲ್ಲೂಕುಗಳು |
|---|---|---|---|---|---|---|---|
| 1 | ಆಲಮಟ್ಟಿ | 123.08 | 121.43 | 98.66 % | 67,000 | ವಿಜಯಪುರ, ಬಾಗಲಕೋಟೆ | ಬಸವನ ಬಾಗೇವಾಡಿ, ಕೊಲ್ಹಾರ, ನಿಡಗುಂದಿ, ಬಬಲೇಶ್ವರ, ಮುದ್ದೇಬಿಹಾಳ, ತಾಳಿಕೋಟೆ , ಹುನಗುಂದ, ಇಳಕಲ್, ಬಾಗಲಕೋಟೆ, ಬೀಳಗಿ, ಜಮಖಂಡಿ |
| 2 | ನಾರಾಯಣಪುರ | 33.31 | 32.56 | 97.73 % | 5,55,000 | ವಿಜಯಪುರ, ಬಾಗಲಕೋಟೆ, ಯಾದಗಿರಿ, ಕಲಬುರಗಿ, ರಾಯಚೂರು | ದೇವರ ಹಿಪ್ಪರಗಿ, ಸಿಂದಗಿ, ಅಲಮೇಲ, ಇಂಡಿ, ಚಡಚಣ, ಹುನಗುಂದ, ಶಹಾಪುರ, ಶೋರಪುರ ,ಹುಣಸಗಿ, ಯಾದಗಿರಿ , ಜೇವರ್ಗಿ, ಯಡ್ರಾಮಿ , ದೇವದುರ್ಗ , ಲಿಂಗಸುಗೂರು |